## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ:476/2019

**ಸಾಕ್ಷಿಯನ್ನು ದಿಃ 02.03.2026 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | | |
|---|---|---|---|
| ಹೆಸರು | ಚಿದಂಬರಾ ಡಿ ಕೆ | ಸಿಡಬ್ಲ್ಯೂಃ 4 | ಪಿಡಬ್ಲ್ಯೂಃ 2 |
| ತಂದೆಯ ಹೆಸರು | ಲೇಟ್ ಕೃಷ್ಣಶೆಟ್ಟಿ | | |
| ವಯಸ್ಸು | 57 ವರ್ಷ | | |
| ಕೆಲಸ | ಅಬಕಾರಿ ರಕ್ಷಕ. | | |
| ವಾಸಸ್ಥಳ | ಮೈಸೂರು. | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ದಿನಾಂಕಃ 03.09.2015 ರಿಂದ 24.07.2020 ರವರೆಗೆ ಹುಣಸೂರು ಅಬಕಾರಿ ವಲಯದಲ್ಲಿ ಅಬಕಾರಿ ರಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 13.03.2019 ರಂದು ಲೋಕಸಭಾ ಚುನಾವಣಾ ನಿಮಿತ್ತ ಅಬಕಾರಿ ನಿರೀಕ್ಷಕರಾದ ಚಾಸಾ–5 ರವರೊಂದಿಗೆ ಅಬಕಾರಿ ಪೇದೇಗಳಾದ ಚಾಸಾ–3 ಮತ್ತು ರಾಜೇಂದ್ರ ಎನ್ ರವರೊಂದಿಗೆ ಹುಣಸೂರು ವಲಯದ ಶಬ್ಬೀರ್ ನಗರದ ಸಾಯಿ ಬಾಬಾ ದೇವಸ್ಥಾನದ ಬಳಿ ಮಧ್ಯಾಹ್ನ 1.10 ಕ್ಕೆ ಇಲಾಖಾ ವಾಹನ ಸಂಖ್ಯೆಃ ಕೆ ಎ 45 ಜಿ 106 ರಲ್ಲಿ ರಸ್ತೆ ಗಸ್ತು ಮಾಡುತ್ತಿದ್ದಾಗ ಚಾಸಾ–5 ರವರು ತನಗೆ ಒಂದು ಖಚಿತ ಮಾಹಿತಿ ಬಂದಿದ್ದು ಯಾವುದೇ ಪರವಾನಗಿ ಇಲ್ಲದೇ ಸೇಂದಿಯನ್ನು ಅಕ್ರಮವಾಗಿ ಸಾಗಾಟ ಮಾಡಲಾಗುತ್ತಿದೆ ಎಂದು ನಮಗೆ ತಿಳಿಸಿದರು. ನಂತರ ಚಾಸಾ–1 ಮತ್ತು 2 ರವರನ್ನು ಶೋಧನಾಕಾರ್ಯಕ್ಕೆ ಪಂಚರಾಗಿ ಸಹಕರಿಸುವಂತೆ ಕೋರಿಕೊಂಡ ಮೇರೆಗೆ ಅವರಿಬ್ಬರೂ ಒಪ್ಪಿಕೊಂಡರು. ಅವರನ್ನು ನಮ್ಮ ಇಲಾಖಾ ವಾಹನದಲ್ಲಿ ಕೂರಿಸಿಕೊಂಡು ಸದರಿ ಸ್ಥಳದಿಂದ ಸ್ವಲ್ಪ ಮುಂದೆ ಹೋಗಿ ಅರಳಿಮರದ ಹತ್ತಿರ ಗಸ್ತು ಮಾಡುತ್ತಿದ್ದಾಗ ಕಿರಿಜಾಜಿ ಕಡೆಯಿಂದ ಒಂದು ದ್ವಿಚಕ್ರ ವಾಹನ ಬಂತು. ಸದರಿ ವಾಹನದ ಹಿಂಭಾಗದಲ್ಲಿ ಎರಡು ಬಿಳಿ ಪ್ಲಾಸ್ಟಿಕ್ ಕ್ಯಾನ್ ಗಳು ಕಂಡು ಬಂದವು. ಸದರಿ ವ್ಯಕ್ತಿಯನ್ನು ನಿಲ್ಲಿಸಿ ಸದರಿ ಕ್ಯಾನ್ ಗಳಲ್ಲಿ ಏನಿದೆ ಎಂದು ಕೇಳಲಾಗಿ ಆತ ಸಮಂಜಸವಾಗಿ ಉತ್ತರವನ್ನು ನೀಡಲಿಲ್ಲ. ಸ್ಥಳದಲ್ಲಿಯೇ ಚಾಸಾ–5 ರವರು ಶೋಧನಾ

ಸಮುಚಿತ ಆಧಾರವನ್ನು ಚಾಸಾ-1 ಮತ್ತು 2 ರವರ ಸಮಕ್ಷಮ ತಯಾರಿಸಿದರು. ಸ್ಥಳದಲ್ಲಿಯೇ ಚಾಸಾ-1 ಮತ್ತು 2 ರವರಿಗೆ ನೋಟೀಸನ್ನು ಜಾರಿಗೊಳಿಸಿ ಅವರ ಸಹಿಯನ್ನು ಪಡೆದುಕೊಳ್ಳಲಾಯಿತು. ಸದರಿ ವ್ಯಕ್ತಿಯೊಂದಿಗೆ ನಾವು ಕೂಡ ಸೇರಿ ಆತನ ವಾಹನದಲ್ಲಿದ್ದ ಕ್ಯಾನ್ ಗಳನ್ನು ಶೋಧನೆ ಮಾಡಲಾಗಿ ಅದರಲ್ಲಿ ಘಾಟು ವಾಸನೆಯಿಂದ ಕೂಡಿದ ಸೇಂದಿ ಇತ್ತು. ಒಂದೊಂದು ಕ್ಯಾನ್ ನಲ್ಲಿ ತಲಾ 35 ಲೀ.ನಂತೆ ಒಟ್ಟು 70 ಲೀ. ಸೇಂದಿ ಪತ್ತೇಯಾಯಿತು. ಸದರಿ ವ್ಯಕ್ತಿಯ ಬಳಿ ಅದನ್ನು ಎಲ್ಲಿಂದ ತಂದೆ ಎಲ್ಲಿಗೆ ತೆಗೆದುಕೊಂಡು ಹೋಗುತ್ತಿದ್ದೀಯಾ ಎಂದು ಕೇಳಲಾಗಿ ಸರಿಯಾಗಿ ಉತ್ತರಿಸಲಿಲ್ಲ. ಸದರಿ ವಾಹನವನ್ನು ಪರಿಶೀಲಿಸಲಾಗಿ ಸುಜುಕಿ ಮ್ಯಾಕ್ಸ್ 100 ನೋಂದಣಿ ಸಂಖ್ಯೆ ಟಿ ಎನ್ 58 ಸಿ 3325 ಆಗಿತ್ತು. ಅದರ ಬಣ್ಣ ಕೆಂಪು ಮತ್ತು ಕಪ್ಪಿನಿಂದ ಕೂಡಿತ್ತು. ಸದರಿ ವ್ಯಕ್ತಿಯ ಹೆಸರು ವಿಳಾಸ ಕೇಳಲಾಗಿ ವಾಸು ಬಿನ್ ಅಣ್ಣಾದೊರೈ 27 ವರ್ಷ , ತಾತ್ಕಾಲಿಕವಾಗಿ ಶಬ್ಬೀರ್ ನಗರದಲ್ಲಿ ಒಂದು ಗುಡಿಸಲಿನಲ್ಲಿ ವಾಸ ಇರುವುದಾಗಿ ಸ್ವಂತ ವಿಳಾಸ ತಮಿಳುನಾಡಿನ ಧರ್ಮಪುರಿಯ ರೋಣಿ ಪಟ್ಟಿ ಗ್ರಾಮ ಎಂದು ತಿಳಿಸಿದ. ಪತ್ತೇಯಾದ ಸೇಂದಿಯಲ್ಲಿ ತಲಾ ಒಂದೊಂದು ಲೀಟರ್ ನ ಎರಡು ಪ್ಲಾಸ್ಟಿಕ್ ಬಾಟಲ್ ಗಳಲ್ಲಿ ತಲಾ ಒಂದೊಂದು ಲೀಟರ್ ಸೇಂದಿಯನ್ನು ರಾಸಾಯನಿಕ ಪರೀಕ್ಷೆಗಾಗಿ ಮಾದರಿಗಾಗಿ ಸಂಗ್ರಹಿಸಿ ಅದಕ್ಕೆ ಪಂಚರ ಮತ್ತು ಚಾಸಾ-5 ರವರ ಸಹಿವುಳ್ಳ ಚೀಟಿಯನ್ನು ಅಂಟಿಸಲಾಯಿತು. ಈ ಬಗ್ಗೆ ಸ್ಥಳದಲ್ಲಿ ಮಧ್ಯಾಹ್ನ 1.50 ರಿಂದ 2.30 ರವರೆಗೆ ಮಹಜರು ಕ್ರಮವನ್ನು ಜರುಗಿಸಲಾಯಿತು. ಅದಕ್ಕೆ ನಾನು ಸಹಿ ಹಾಕಿದ್ದೇನೆ ಸಾಕ್ಷಿ ನಿಪಿ-1 ರ ಮಹಜರಿನಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ-1 ಬಿ ಎಂದು ಗುರುತಿಸಲಾಯಿತು. ಆ ದಿನ ಮಾದರಿಗಾಗಿ ಸಂಗ್ರಹಿಸಿದ ಒಂದೊಂದು ಲೀಟರ್ ನ ಎರಡು ಕ್ಯಾನ್ ಗಳನ್ನು ಮತ್ತು ಅದರಲ್ಲಿರುವ ಸೇಂದಿಯನ್ನು ಹಾಗೂ 2 ದೊಡ್ಡ ಕ್ಯಾನ್ ಗಳನ್ನು ನೋಡಿದರಿ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಮು ಮಾ 1 ರಿಂದ 4 ನ್ನು ನೋಡಿ ಗುರುತಿಸುತ್ತಾರೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

**(ಈ ಹಂತದಲ್ಲಿ ಮಾನ್ಯ ಸಅಅ ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)**

**<u>ಪಾಟೀಸವಾಲುಃ ಮಾನ್ಯ ಸಸಅ ರವರಿಂದಃ</u>**

ಸದರಿ ಸೇಂದಿಯನ್ನು ಆರೋಪಿಯು ಸಾಗಾಣಿಕೆ ಮಾಡಲು ನಮ್ಮ ಇಲಾಖೆಯಿಂದ ಸೂಕ್ತ ಪರವಾನಗಿ ಅಥವಾ ರಹದಾರಿಯನ್ನು ಪಡೆಯದೇ ಇದ್ದ ಕಾರಣ ಕಾಯಿದೆಗೆ ವಿರುದ್ಧವಾಗಿರುವುದರಿಂದ ಅದನ್ನು ನಾವು ಅಮಾನತ್ತು ಪಡಿಸಿಕೊಂಡಿದ್ದೇವೆ ಎಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಲ್ ಕೆ ಜೆ ವಕೀಲರಿಂದಃ</u>**

ಚಾಸಾ–5 ರವರಿಗೆ ಮಾಹಿತಿ ಬಂತು ಎನ್ನುವ ಸಮಯದಲ್ಲಿ ನಾವು ಗಸ್ತು ತಿರುಗುತ್ತಿದ್ದೆವು. ಚಾಸಾ–5 ರವರಿಗೆ ಮಾಹಿತಿ ಬಂತು ಎನ್ನುವ ಸಮಯದಲ್ಲಿ ನಾವು ಶಬ್ಬೀರ್ ನಗರದ ಸಾಯಿ ಬಾಬಾ ಮಂದಿರದ ಹತ್ತಿರ ಗಸ್ತು ತಿರುಗುತ್ತಿದ್ದೆವು. ಆ ಸಮಯದಲ್ಲಿ ಚಾಸಾ–5 ರವರು ನಮ್ಮ ಜೊತೆ ಇದ್ದರು. ನಾವು ಯಾವ ಸ್ಥಳಕ್ಕೆ ಗಸ್ತಿಗೆ ಹೋಗುತ್ತಿದ್ದೇವೆ ಎಂಬ ಬಗ್ಗೆ ಕಛೇರಿಯ ದಿನಚರಿ ಪುಸ್ತಕದಲ್ಲಿ ನಮೂದಿಸುತ್ತೇವೆ ಎಂದರೆ ಸರಿ. ನಾವು ಗಸ್ತು ಮಾಡುತ್ತಿದ್ದೆವು ಎನ್ನುವ ಸಂದರ್ಭ ಲೋಕ ಸಭಾ ಚುನಾವಣೆಯ ಸಮಯ ಎಂದರೆ ಸರಿ. ಚುನಾವಣೆಯ ಸಮಯದಲ್ಲಿ ಎಲ್ಲಾ ಇಲಾಖೆಯ ಅಧಿಕಾರಿಗಳು ಚುನಾವಣಾ ಮೇಲಾಧಿಕಾರಿಯಾಗಿ ನೇಮಕ ಮಾಡಿರುತ್ತಾರೆ ಎಂದರೆ ಎಲ್ಲರನ್ನೂ ಮಾಡಿರುವುದಿಲ್ಲ. ನಮ್ಮ ಇಲಾಖೆಗೆ ಸಂಬಂಧಪಟ್ಟಂತೆ ಚಾಸಾ–5 ರವರನ್ನು ನೇಮಕ ಮಾಡಿದ್ದರು. ಆ ಸಮಯದಲ್ಲಿ ನಮ್ಮ ಕಛೇರಿಯಲ್ಲಿ ಒಟ್ಟು 6 ಅಬಕಾರಿ ರಕ್ಷಕರು , ಒಂದು ಅಬಕಾರಿ ಉಪನೀರಿಕ್ಷಕರು ಮತ್ತು ಒಂದು ಅಬಕಾರಿ ನಿರೀಕ್ಷಕರು ಕರ್ತವ್ಯ ನಿರ್ವಹಿಸುತ್ತಿದ್ದೆವು ಎಂದರೆ ಸರಿ. ಚುನಾವಣೆಯ ಸಮಯದಲ್ಲಿ ನಮ್ಮ ಕಛೇರಿಯ ಎಲ್ಲಾ ಸಿಬ್ಬಂದಿಗಳು ತಂಡೋಪ ತಂಡವಾಗಿ ಕರ್ತವ್ಯ ನಿರ್ವಹಿಸುತ್ತೇವೆ ಎಂದರೆ ಸರಿ. ಆ ಸಮಯದಲ್ಲಿ ನಮ್ಮ ಕಛೇರಿಯ ಒಟ್ಟು 4 ಜನ ರಸ್ತೆಗಾವಲು ಕರ್ತವ್ಯ ನಿರ್ವಹಿಸುತ್ತಿದ್ದೆವು. ಆ ದಿನ ನಮ್ಮ

ಕಛೇರಿಯ ಒಬ್ಬ ಸಿಬ್ಬಂದಿ ಮಾತ್ರ ಗಸ್ತು ಕರ್ತವ್ಯದಲ್ಲಿದ್ದು ಉಳಿದವರು ಬೇರೆ ಕಡೆ ಕರ್ತವ್ಯದಲ್ಲಿದ್ದರು ಎಂದರೆ ಸರಿಯಲ್ಲ.

ಆ ದಿನ ಚಾಸಾ-5 ರವರಿಗೆ ಯಾವುದೇ ಮಾಹಿತಿ ಬಂದಿರಲಿಲ್ಲ ಮತ್ತು ನಾನು ಶಬ್ಬೀರ್ ನಗರದಲ್ಲಿ ಗಸ್ತು ಕರ್ತವ್ಯ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಶಬ್ಬೀರ್ ನಗರದ ಸಾಯಿ ಬಾಬಾ ಮಂದಿರದ ಹತ್ತಿರ ಪಂಚರನ್ನು ಬರಮಾಡಿಕೊಂಡೆವು. ಪಂಚರನ್ನು ಬರಮಾಡಿಕೊಂಡ ಸ್ಥಳದಿಂದ ಘಟನಾ ಸ್ಥಳ ಸುಮಾರು ½ ಕಿ.ಮೀ ದೂರ ಇದೆ. ಸಿದ್ದನಕೊಪ್ಪಲು ಗೇಟ್ ಬಳಿ ಹುಣಸೂರು ಕಿರಿಜಾಜಿ ರಸ್ತೆ ಉತ್ತರ ದಕ್ಷಿಣವಾಗಿ ಹಾದು ಹೋಗುತ್ತದೆ ಎಂದರೆ ಸರಿ. ನಾವು ಹುಣಸೂರು ಕಿರಿಜಾಜಿ ರಸ್ತೆಯಲ್ಲಿರುವ ಸಿದ್ದಯ್ಯ ಕೊಪ್ಪಲಿಗೆ ಹೋಗುವ ಅರಳೀ ಮರದ ರಸ್ತೆ ಮತ್ತು ಚಿಕ್ಕ ಸೇತುವೆಯ ಹತ್ತಿರ ಇದ್ದೆವು. ಸದರಿ ಅರಳಿ ಮರದ ಪೂರ್ವ ದಿಕ್ಕಿಗೆ ಹೋಗುವ ರಸ್ತೆ ಸಿದ್ದನಕೊಪ್ಪಲು ಗ್ರಾಮಕ್ಕೆ ಹೋಗುತ್ತದೆ ಎಂದರೆ ಸರಿ. ಸದರಿ ರಸ್ತೆಯ ಪಶ್ಚಿಮ ದಿಕ್ಕಿಗೆ ಲಕ್ಷ್ಮಣೇಗೌಡ ಜಮೀನಿಗೆ ಹೊಂದಿಕೊಂಡಂತೆ ಅಂಗಡಿ ಮಳಿಗೆಗಳು ಇವೆ ಎಂದರೆ ಇಲ್ಲ. ಸದರಿ ಅಂಗಡಿ ಮಳಿಗೆಗಳ ಪಕ್ಕದಲ್ಲಿ ಸಾಯಿ ಬಾಬಾ ಮಂದಿರ ಇದೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಅದಕ್ಕಿಂತಲೂ ಮುಂದೆ ಇದ್ದೆವು ಎಂದು ನುಡಿಯುತ್ತಾರೆ. ನಾವು ಘಟನಾ ಸ್ಥಳಕ್ಕೆ ಹೋಗಿದ್ದಲ್ಲಿ ಅದರ ಚೆಕ್ಕು ಬಂದಿಯ ಬಗ್ಗೆ ಸರಿಯಾದ ಮಾಹಿತಿ ಇರುತ್ತಿತ್ತು , ಹೋಗದೇ ಇರುವ ಕಾರಣ ಸರಿಯಾದ ಮಾಹಿತಿ ಇಲ್ಲ ಎಂದೆರೆ ಸರಿಯಲ್ಲ.

ನಾವು ಸ್ಥಳಕ್ಕೆ ಹೋದ 5-10 ನಿಮಿಷದಲ್ಲಿ ಆರೋಪಿ ಬಂದ. ನಾವು ಸಮವಸ್ತ್ರದಲ್ಲಿದ್ದೆವು. ಶಬ್ಬೀರ್ ನಗರ ಕಿರಿಜಾಜಿ ಡಾಂಬರ್ ರಸ್ತೆಯು 2 ಕಿ.ಮೀ. ವರೆಗೆ ನೇರವಾದ ರಸ್ತೆ ಆಗಿದೆ ಎಂದರೆ ನನಗೆ ಮಾಹಿತಿ ಇಲ್ಲ. ಸದರಿ ರಸ್ತೆ ನೇರವಾಗಿ ಇರುವ ಕಾರಣ ಕಿರಿಜಾಜಿಯಿಂದ ಬರುವಾಗ ಸುಮಾರು 1 ½ ಕಿ ಮೀ ವರೆಗೆ ಯಾವುದೇ ವಾಹನ ಕಾಣುತ್ತದೆ ಎಂದರೆ ರಸ್ತೆಯ ಬಗ್ಗೆ ಗೊತ್ತಿಲ್ಲ. ನಾವು ಸ್ಥಳದಲ್ಲಿ ಯಾವುದೇ ಪಂಚರನ್ನು ಕರೆದುಕೊಂಡು ಹೋಗಿಲ್ಲ ಮತ್ತು ಯಾವುದೇ ಮಹಜರು ಕ್ರಮವನ್ನು ಜರುಗಿಸಿಲ್ಲ ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಹೋಗಿಲ್ಲ , ಹೋಗಿದ್ದರೆ ರಸ್ತೆಯ ಬಗ್ಗೆ ಸರಿಯಾದ ಮಾಹಿತಿ ಇರುತ್ತಿತ್ತು ಎಂದರೆ ಸರಿಯಲ್ಲ. ಆರೋಪಿಯಿಂದ ಯಾವುದೇ ಸೇಂದಿಯನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಮುದ್ದೆ ಮಾಲುಗಳ ಮೇಲೆ ನಾನು ಸಹಿ

ಮಾಡಿಲ್ಲ. ಅದರ ಮೇಲೆ ಸಹಿ ಮಾಡಲು ತೊಂದರೆ ಇರಲಿಲ್ಲ. ಯಾವುದೇ ಘಟನೆ ನಡೆಯದೇ ಇದ್ದರೂ ಸಹ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಚುನಾವಣಾ ಸಂದರ್ಭವಾದ ಕಾರಣ ಇಲಾಖೆಯ ಅಂಕಿಅಂಶಕೋಸ್ಕರ ಪಕ್ಕದ ಜಮೀನಿನಲ್ಲಿ ಕೂಲಿ ಕೆಲಸ ಮಾಡುತ್ತಿದ್ದ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಸುಳ್ಳು ಪ್ರಕರಣಕ್ಕೆ ಪೂರಕವಾಗಿ ನುಮ್ಮ ಕಛೇರಿಯಲ್ಲಿದ್ದ ಮುಮಾ 1 ರಿಂದ 4ನ್ನು ಈ ಪ್ರಕರಣಕ್ಕೆ ಸೃಷ್ಟಿಸಿ ಹಾಜರುಪಡಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿಯ ವಿರುದ್ಧ ಯಾವುದೇ ಆರೋಪ ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.